

# ಮುಗ್ಧ ಮನಸ್ಸು ಮುರಿದು ಸದ್ದು

**ಪುಟ್ಟ ಮಗುವೊಂದರ ಜಗತ್ತನ್ನು ದೊಡ್ಡವರ ಜಂಜಡಗಳು ಭ್ರಷ್ಟಗೊಳಿಸುತ್ತ ಹೋಗುವುದನ್ನು ಮೆಲೊಡ್ರಾಮಾ ರೀತಿಯಲ್ಲಿ ತೋರಿಸುವ ಕಿರುಚಿತ್ರವಿದು.**

■ ಗೌರಿ

‘ಲೈಫು ಇಷ್ಟೇನೆ!’, ‘ಲೂಸಿಯಾ’, ‘ಯೂಟರ್ನ್’ ಸಿನಿಮಾಗಳ ನಿರ್ದೇಶಕ ಪವನ್ ಕುಮಾರ್ ‘ಎಫ್.ಯು.ಸಿ.’ ಎಂಬ ವೇದಿಕೆ ನಿರ್ಮಿಸಿಕೊಂಡು ಸಿನಿಮಾ ಕಲಿಕೆ, ಪ್ರಯೋಗದ ಕುರಿತು ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಇದರ ಭಾಗವಾಗಿಯೇ ಅವರು ನಿರ್ದೇಶಿಸಿರುವ ಕಿರುಚಿತ್ರ ‘ಅಸ್ಮಿತೆ’.

ದೊಡ್ಡವರ ಜಂಜಡಗಳಲ್ಲಿ ನಲುಗುವ ಪುಟ್ಟ ಮಗುವೊಂದರ ಮುಗ್ಧ ಜಗತ್ತು ಈ ಕಿರುಚಿತ್ರದ ಕೇಂದ್ರದಲ್ಲಿದೆ. ಆ ಮುಗ್ಧ ಜಗತ್ತನ್ನು ದೊಡ್ಡವರ ಸೂಕ್ಷ್ಮ ಕ್ರೌರ್ಯಗಳು ಹೇಗೆ ಅತಿಕ್ರಮಿಸಿಕೊಳ್ಳುತ್ತಾ ಹೋಗುತ್ತವೆ ಎನ್ನುವುದನ್ನೇ ಈ ಕಿರುಚಿತ್ರದ ವಸ್ತು ಎನ್ನಬಹುದು.

ಸದಾ ಕೆಲಸದಲ್ಲಿ ಮುಳುಗಿರುವ, ಫ್ಯಾಮಿಲಿಗೆ ಸಮಯ ಕೊಡಲಾಗದ ಅಪ್ಪ, ಮಗನನ್ನು ಮುದ್ದು ಮಾಡುವ ಅಮ್ಮ, ಅಮ್ಮ ತೀರಿ ಹೋದ ಮೇಲೆ ಮಗನನ್ನು ನೋಡಿಕೊಳ್ಳುವ ನೆಪದಲ್ಲಿ ಅಪ್ಪ ಎರಡನೇ ಮದುವೆಯಾಗುವುದು, ಮಲತಾಯಿ ಮತ್ತು ಮಗನ ನಡುವೆ ಮೂಡುವ ಬಿರುಕುಗಳು... ಇವೆಲ್ಲವೂ ಕ್ಲೀಷೆ ಅನ್ನುವಷ್ಟು ದೃಶ್ಯ ಮಾಧ್ಯಮದಲ್ಲಿ ಬಂದುಬಿಟ್ಟಿದೆ. ಈ ಕಿರುಚಿತ್ರವೂ ಕಥನದಲ್ಲಿ ಅದೇ ಹಳಸಲು ಎಳೆಯನ್ನು ಎತ್ತಿಕೊಂಡು ಹೊಸ ರೀತಿಯಲ್ಲಿ ಕಟ್ಟುವ ಪ್ರಯತ್ನ ಮಾಡುತ್ತದೆ. ವಾಚ್ಯವಾಗಿ ಮುಖಕ್ಕೆ ರಾಚುವ ಹಾಗಿರುವುದನ್ನು ನಾಜೂಕಾಗಿ ಹೇಳುವ ಪ್ರಯತ್ನವಿದೆ. ಇಲ್ಲಿನ ಮಲತಾಯಿ ಹಳೆಯ ಸಿನಿಮಾಗಳ ಮಲತಾಯಿಯಂತೆ ನೇರಾನೇರ ಮಗುವನ್ನು ಹಿಂಸಿಸುವುದಿಲ್ಲ. ಪಾತ್ರೆ ತೊಳೆಯಲಿಕ್ಕ ಹಚ್ಚುವುದಿಲ್ಲ. ಆದರೆ, ಸಂಸ್ಕೃತಿ–ಜೀವನಶೈಲಿಗಳ ಭಿನ್ನತೆಯೇ ಅವರ ನಡುವೆ ಒಂದು ಅಂತರವನ್ನು ಸೃಷ್ಟಿಸುತ್ತದೆ.

ಆ ಮಲತಾಯಿಗೂ ಇವನದೇ ವಯಸ್ಸಿನ ಮಗಳಿದ್ದಾಳೆ. ಗೊತ್ತಿಲ್ಲದೆಯೇ ಕುಟುಂಬದ ಒಳಗೆ ಇವನ ಸ್ಥಾನವನ್ನು ಅವಳು ಆಕ್ರಮಿಸಿಕೊಳ್ಳುತ್ತಾಳೆ. ಅಪ್ಪ ಅವಳ ಜೊತೆಗೆ ಆಡುತ್ತಾನೆ, ಅವಳ ಜೊತೆಗೆ ಕೂತು ಟೀವಿ ನೋಡುತ್ತಾನೆ, ಹುಡುಗ ಬೆಳಿಗ್ಗೆ ಎದ್ದು ಓಡಿಬಂದು ಕೂಡುತ್ತಿದ್ದ ಜಾಗದಲ್ಲಿ ಅವಳು ಕೂಡುತ್ತಾಳೆ. ಹೀಗೆ ಹುಡುಗನ ಮನಸ್ಸು ಒಳಗೊಳಗೇ ಮುದುಡುತ್ತಾ ಹೋಗುತ್ತದೆ. ಅವನು ಆ ಕುಟುಂಬದ ವಲಯದಿಂದ ಹೊರಗೆ ಸರಿಯುತ್ತಾ ಹೋಗುತ್ತಾನೆ.

ಅನುಕಂಪ ಹುಟ್ಟಿಸುವುದು, ಆತಂಕ ಸೃಷ್ಟಿಸುವುದು, ಕೊನೆಯಲ್ಲಿ ನಿರಾಳರನ್ನಾಗಿ ಮಾಡುವುದು – ಈ ಮೂರು ಅಂಶಗಳು ಮೆಲೊಡ್ರಾಮಾಗಳ ಸಿನಿಮಾಗಳ ಜನಪ್ರಿಯ ಸೂತ್ರ. ಈ ಕಿರುಚಿತ್ರವೂ ಇದೇ ಸೂತ್ರವನ್ನು ನೆಚ್ಚಿದೆ. ಆದರೆ ಸಂಭಾಷಣೆಯನ್ನೇ ಬಳಸಿಕೊಳ್ಳದೆ, ಕಥನದ ಕ್ಲೀಷೆಯನ್ನು ಕೊಂಚ ಮರೆಮಾಚಲು ನಿರ್ದೇಶಕರು ಪ್ರಯತ್ನಿಸಿದ್ದಾರೆ. ಅದು ಒಂದು ಮಟ್ಟಿಗೆ ಕೆಲಸ ಮಾಡಿದೆ ಕೂಡ. ಆದರೆ ಒಂದು ಸಮಸ್ಯೆಯನ್ನು ದಿಟ್ಟವಾಗಿ ಎದುರಿಸುವ, ಅದರ ಸಂಕೀರ್ಣತೆಯನ್ನು ಹಿಡಿದಿಡುವ ಮಹತ್ವಾಕಾಂಕ್ಷೆ ಈ ಕಿರುಚಿತ್ರಕ್ಕೆ ಇಲ್ಲ. ಆ ಕ್ಷಣದಲ್ಲಿ ಭಾವುಕರನ್ನಾಗಿಸಿ ನಿರಾಳರನ್ನಾಗಿಸಿ ಮುಕ್ತಿಕೊಡುವುದೇ ಇದರ ಉದ್ದೇಶ. ಆ ಉದ್ದೇಶ ಬಹುಮಟ್ಟಿಗೆ ಈಡೇರಿದೆ.

ಹಲವು ಹೊಸಬರನ್ನು ಇಟ್ಟುಕೊಂಡು ಈ ಕಿರುಚಿತ್ರ ನಿರ್ಮಿಸಿದ್ದಾರೆ ಎಂಬುದೂ ಮುಖ್ಯವಾದ ಸಂಗತಿಯೇ. ಗೋಮಟೇಶ್ ಉಪಾಧ್ಯೆ ಅವರ ಕ್ಯಾಮೆರಾ ಚಲನೆಯಲ್ಲಿ ಕಥೆಯ ನಿರೂಪಕನೂ ಆಗುವ ಹಂಬಲ ಇದೆ. ಪೂರ್ಣಚಂದ್ರ ತೇಜಸ್ವಿ ಸಂಗೀತವೂ ಸಂಭಾಷಣೆಯ ಜಾಗವನ್ನು ಸಮರ್ಥವಾಗಿ ರಿಪ್ಲೇಸ್ ಮಾಡಿದೆ. ಪುಟಾಣಿ ಹುಡುಗ ಸೂರಜ್ ವಯಸ್ಸಿಗೆ ಮೀರಿದ ಭಾವಗಳನ್ನು ಮುಖದಲ್ಲಿ ತುಳುಕಿಸಿದ್ದಾನೆ.

‘ಅಸ್ಮಿತೆ’ ಎಂದರೆ 'ತನ್ನ ತನದ ಬಗೆಗಿನ ಅರಿವು', ‘ಸ್ವಪ್ರಜ್ಞೆ’ ಎಂಬ ಅರ್ಥಗಳಿವೆ. ಈ ಕಿರುಚಿತ್ರವೂ ಆ ಸೂಚನೆಗಳನ್ನು ನೀಡುತ್ತದಾದರೂ ಕೊನೆಯಲ್ಲಿ ಟ್ವಿಸ್ಟ್ ಕೊಡುವ ಖಯಾಲಿಗೆ ಬಲಿಯಾಗಿ ಸಮಸ್ಯೆಯನ್ನು ತೆಳುವುಗೊಳಿಸಲಾಗಿದೆ. ಹಾಗಾಗಿ ಈ ಶೀರ್ಷಿಕೆ ಚಿತ್ರಕ್ಕೆ ತುಸು ಭಾರವಾಗಿಯೇ ಕಾಣಿಸುತ್ತದೆ.



**ಹೆಸರು:** ಅಸ್ಮಿತೆ
**ನಿರ್ದೇಶನ:** ಪವನ್ ಕುಮಾರ್
**ಛಾಯಾಗ್ರಹಣ:** ಗೋಮಟೇಶ್ ಉಪಾಧ್ಯೆ
**ಸಂಗೀತ:** ಪೂರ್ಣಚಂದ್ರ ತೇಜಸ್ವಿ
**ಸಂಕಲನ:** ಸುರೇಶ್ ಆರ್ಮುಗಂ
**ತಾರಾಗಣ:** ಸಮೀಕ್ ಶೆಣೈ, ಸೂರಜ್ ಕಿಶೋರ್, ಲಾಸ್ಯ ಪಸೌನ, ಸುಷ್ಮಾ ನಿರ್ಮಲ್, ಸೌಮ್ಯ ಜಗನ್‌ಮೂರ್ತಿ

ಈ ಕಿರುಚಿತ್ರ ವೀಕ್ಷಣೆಗೆ **bit.ly/3fegYqL** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.